ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ.

**ಸಿ.ಸಿ.911/2017**

| | | | |
|---|---|---|---|
| ಸಾಕ್ಷಿದಾರರ ಹೆಸರು | :: | ಎನ್ ನಾಗರಾಜು | ಸಿಡಬ್ಲ್ಯೂ:: **01** |
| ತಂದೆಯ ಹೆಸರು | :: | ನಾರಾಯಣಪ್ಪ | ಪಿಡಬ್ಲ್ಯೂ:: **01** |
| ವಯಸ್ಸು | :: | 68 ವರ್ಷ | ಪ್ರಮಾಣೀಕರಿಸಿದ ದಿನಾಂಕ |
| ವೃತ್ತಿ | :: | ವ್ಯವಸಾಯ | 09.07.2026 |
| ವಾಸ ಸ್ಥಳ | :: | ಜೋಗುಪೇಟೆ, ಶಿಡ್ಲಘಟ್ಟ ತಾಲ್ಲೂಕು. | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ಆರೋಪಿ ನನಗೆ ಗೊತ್ತು.

**2.** ದಿನಾಂಕ **26.05.2017** ರಂದು ಮಧ್ಯಾಹ್ನ ಸುಮಾರು **3.00** ರಿಂದ **4.00** ಗಂಟೆಯ ಸಮಯದಲ್ಲಿ ನಾನು ಜಮೀನಿನಲ್ಲಿ ಕೆಲಸ ಮಾಡುವಾಗ ಆರೋಪಿ ಏಕಾಏಕಿ ಬಂದು ಜಮೀನಿನಲ್ಲಿ ಇದ್ದ ಹಾಳು ಬಾವಿಗೆ ನನ್ನನ್ನು ತಳ್ಳಲು ಬಂದನು. ನಂತರ ನಾನು ತಪ್ಪಿಸಿಕೊಳ್ಳಲು ಪ್ರಯತ್ನಿಸಿದಾಗ, ಚಾಕುವಿನಿಂದ ನನ್ನ ಎಡ ಭುಜದ ಮೇಲೆ ಎಳೆದನು. ನಂತರ ಇದೇ ಜಮೀನಿನಲ್ಲಿ ಸಾಯಿಸಿಬಿಡುತ್ತೇನೆಂದು ಹೆದರಿಸಿ, ಕೆಟ್ಟ ಮಾತುಗಳಿಂದ ಬೈದನು. ಆಗ ಚಾಸಾ-**2, 3** ಮತ್ತು ಆಂಜಿನಪ್ಪ ರವರು ಬಂದು ಜಗಳ ಬಿಡಿಸಿ, ನ್ಯಾಯ ಪಂಚಾಯತಿ ಮಾಡುತ್ತೇವೆ ಎಂದು ಹೇಳಿದರು. ನಂತರ ನಾನು ಶಿಡ್ಲಘಟ್ಟ ಸಾರ್ವಜನಿಕ ಆಸ್ಪತ್ರೆಗೆ ಹೋದಾಗ, ವೈದ್ಯರು ಬ್ಯಾಂಡೇಜ್ ಹಾಕಿ ಇಂಜೆಕ್ಷನ್ ಕೊಟ್ಟರು. ಒಂದು ರಾತ್ರಿ ಆಸ್ಪತ್ರೆಯಲ್ಲಿ ಇರುತ್ತೇನೆ. ಆಸ್ಪತ್ರೆಯಲ್ಲಿ ಇದ್ದಾಗ ಪೋಲಿಸರು ಹೇಳಿಕೆ ಪಡೆದುಕೊಂಡರು. ದಿನಾಂಕ **17.07.2017** ರಂದು ನಾನು ಶಿಡ್ಲಘಟ್ಟ ಪೋಲಿಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಗೆ ಪ್ರಥಮ ವರ್ತಮಾನ ಹೇಳಿಕೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ, ಪ್ರಥಮ ವರ್ತಮಾನ ಹೇಳಿಕೆಯನ್ನು ನಿಪಿ-**1** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-**1**(ಎ) ಎಂದು ಗುರುತಿಸಲಾಯಿತು.

**3.** ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ ಮೇರೆಗೆ, ಸ್ಥಳ ಪಂಚನಾಮೆಯನ್ನು ನಿಪಿ-**2** ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-

**2**(ಎ) ಗುರುತಿಸಲಾಯಿತು. ನಿಪಿ-**2** ಕ್ಕೆ ದಿನಾಂಕ **26.07.2017** ರಂದು ನಮ್ಮ ಜಮೀನಿನಲ್ಲಿ ಪೋಲಿಸರು ಮಹಜರ್ ಮಾಡಲು ಬಂದಾಗ ಸಹಿ ಮಾಡಿರುತ್ತೇನೆ. ನಿಪಿ-**2** ರ ಕಾಲಕ್ಕೆ ಒಂದು ಚಾಕುವನ್ನು ಪೋಲಿಸರು ಅಮಾನತ್ತುಪಡಿಸಿಕೊಂಡರು. ಸಾಕ್ಷಿಯು ನಿಪಿ-**2** ರ ಕಾಲಕ್ಕೆ ಅಮಾನತ್ತುಪಡಿಸಿಕೊಳ್ಳಲಾದ ಚಾಕುವನ್ನು ಗುರುತಿಸಿದ ಮೇರೆಗೆ, ಚಾಕುವನ್ನು ಮು.ಮಾ-**1** ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರು ಇರುತ್ತಾರೆ.

(ಸಾಕ್ಷಿಯು ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟಿ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಆರೋಪಿ ನನ್ನ ಕೈಗಳನ್ನು ಹಿಡಿದು ಎಳೆದಾಡಿ ನನಗೆ ಹೊಡೆದಿರುತ್ತಾರೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಪೋಲಿಸರು ದಿನಾಂಕ **12.07.2017** ರಂದು ನಿಪಿ-**2** ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ಸರಿ. ನಿಪಿ-**2** ಸ್ಥಳ ಪಂಚನಾಮೆಯನ್ನು ಮಧ್ಯಾಹ್ನ **2.30** ರಿಂದ **3.30** ರ ಸಮಯದಲ್ಲಿ ಜರುಗಿಸಿರುತ್ತಾರೆ ಎಂದರೆ ಸರಿ.

<u>ಪಾಟಿ ಸವಾಲುಃ ಆರೋಪಿ ಪರ ಶ್ರೀ ಡಿ ಎ ಎ ವಕೀಲರಿಂದಃ</u>

ನಾನು ನಿಪಿ-**1** ರಲ್ಲಿ ಬೂದಾಳ ಗ್ರಾಮದ ಸರ್ವೇ ನಂ.**121** ರಲ್ಲಿ ಗಲಾಟೆಯಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ನಾನು ಸರ್ವೇ ನಂ.**121** ರ ಜಮೀನಿನಲ್ಲಿ ಗೇಣಿದಾರನೆಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನ್ಯಾಯಾಧೀಕರಣ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸದರಿ ಜಮೀನು ಆರೋಪಿ ಮಾಲೀಕರು ಮತ್ತು ಸ್ವಾಧೀನದಲ್ಲಿರುತ್ತಾರೆ ಎಂದು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ. ಸರ್ವೇ ನಂ.**121** ಕ್ಕೆ ಸಂಬಂಧಪಟ್ಟಂತೆ ನಾನು ದಾಖಲೆಯನ್ನು ತನಿಖಾಧಿಕಾರಿಯವರಿಗೆ ನೀಡಿದ್ದೆ. ನಾನು ದೂರನ್ನು ಆಸ್ಪತ್ರೆ ಮತ್ತು ಪೋಲಿಸ್ ಠಾಣೆ ಎರಡೂ ಕಡೆಯೂ ಸಹ ನೀಡಿರುತ್ತೇನೆ. ನಿಪಿ-**1** ನ್ನು ಆಸ್ಪತ್ರೆಗೆ ಬಂದಿದ್ದ ಪೋಲಿಸ್ ಪೇದೆ ಬರೆದಿರುತ್ತಾರೆ. ನಾನು ಗಲಾಟೆಯಾದ ದಿನದಂದೇ ಚಿಕಿತ್ಸೆ ಪಡೆದಿರುತ್ತೇನೆ.

**2.** ಪೋಲಿಸರು ಗಲಾಟೆಯಾದ **2** ತಿಂಗಳ ನಂತರ ಬಂದು ಸ್ಥಳ ಪಂಚನಾಮೆಯನ್ನು ಮಾಡಿರುತ್ತಾರೆ. ಚಾಸಾ-**2** ಮತ್ತು **3** ರವರಿಗೆ ಸರ್ವೇ ನಂ.**121** ರ ಅಕ್ಕ-ಪಕ್ಕ ಜಮೀನುಗಳು ಇರುವುದಿಲ್ಲ. ಗಲಾಟೆ ಆಗಿದೆ ಎಂದು ಹೇಳುವ ಸಮಯಕ್ಕೆ ಅಕ್ಕ-ಪಕ್ಕದ ಜಮೀನಿನ ವಾಸಿಗಳು ಇರಲಿಲ್ಲ. ಪೋಲಿಸರು ಸ್ಥಳಕ್ಕೆ ಬಂದಾಗ ಚಾಸಾ-**2** ಮತ್ತು **3** ರವರು ಇದ್ದರು.

**3.** ನಾನು ಸರ್ವೇ ನಂ.**121** ರ ಸಂಬಂಧ ಆರೋಪಿ ಗಲಾಟೆ ಮಾಡಿರುತ್ತಾರೆ ಎಂದು ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. ಸದರಿ ಎರಡೂ ಪ್ರಕರಣಗಳನ್ನು ಆರೋಪಿಯೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ನನ್ನ ಎಡ ಭುಜದ ಮೇಲೆ ರಕ್ತದ ಗಾಯ ಆಗಿತ್ತು. ನನ್ನ ಬಟ್ಟೆಗೂ ಸಹ ರಕ್ತದ ಕಲೆ ಆಗಿತ್ತು. ಸದರಿ ರಕ್ತದ ಕಲೆ ಆಗಿದ್ದ ಬಟ್ಟೆಯನ್ನು ನಾನು ಪೋಲಿಸರಿಗೆ ನೀಡಿಲ್ಲ. ನಾನು ಹೇಳುವಂತೆ ಯಾವುದೇ ಗಲಾಟೆ ಆಗಿಲ್ಲ ಮತ್ತು ನನಗೆ ಯಾವುದೇ ಗಾಯ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಜಮೀನಿನ ವಿಚಾರದಲ್ಲಿ ಆರೋಪಿಯನ್ನು ಹೆದರಿಸಲು ಆರೋಪಿಯ ವಿರುದ್ಧ ನಿಪಿ-**1** ರಂತೆ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-**2** ಕ್ಕೆ ನಾನು ಸ್ಥಳದಲ್ಲಿ ಸಹಿ ಮಾಡಿಲ್ಲ, ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-**2** ರಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತು.

<u>ಮರು ವಿಚಾರಣೆಃ ಇಲ್ಲ.</u>

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

**(ಸುಕನ್ಯ ಸಿ.ಎಸ್.)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.